# ನಿಮ್ಮೊಡನೆ

## ಧಾರ್ಮಿಕ ವ್ಯಸನದ ಮೇಯುವ ಆಟ

ಧರ್ಮದ ವಿಷಯದಲ್ಲಿ ಹಿಂದೆ ಯಾವ ಸರ್ಕಾರಗಳಿಗೂ ಇಲ್ಲದ ಉತ್ಸಾಹವನ್ನು ಪ್ರಸ್ತುತ ಬಿಜೆಪಿ ಸರ್ಕಾರ ತನ್ನ ಆರಂಭದ ದಿನಗಳಿಂದಲೂ ವ್ಯಕ್ತಪಡಿಸುತ್ತಿದೆ. ಧಾರ್ಮಿಕ ವಿಧಿ ವಿಧಾನಗಳು ಸರ್ಕಾರಕ್ಕೆ ವ್ಯಸನವಾಗಿ ಪರಿಣಮಿಸಿವೆ. ಅಧಿಕಾರದ ಉಳಿವಿಗಾಗಿ ಕಳೆದ ಮೂರು ವರ್ಷಗಳಲ್ಲಿ ಅಸಂಖ್ಯ ಪೂಜೆ, ಹೋಮ– ಹವನಗಳು ಬಹಿರಂಗವಾಗಿಯೇ ನಡೆದಿವೆ.

ನಾಡಿನಲ್ಲಿ ಸಮೃದ್ಧ ಮಳೆ– ಬೆಳೆ ಆಗಲೆಂದು ಮುಜರಾಯಿ ದೇಗುಲಗಳಲ್ಲಿ ವಿಶೇಷ ಪೂಜೆ ಹಾಗೂ ಹೋಮ ಹವನಗಳನ್ನು ನಡೆಸಲು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ಆಶಯ ಒಳ್ಳೆಯದೇ. ಆದರೆ, ಅದಕ್ಕಾಗಿ ಅನುಸರಿಸುತ್ತಿರುವ ಕ್ರಮ ಸರ್ಕಾರವೊಂದಕ್ಕೆ ಇರಬಹುದಾದ ವಿವೇಕದ ಬಗ್ಗೆಯೇ ಅನುಮಾನ ಮೂಡಿಸುವಂತಿದೆ. ಇಲ್ಲಿ ಎರಡು ಲೋಪಗಳಿವೆ. ಮೊದಲನೆಯದು, ಸಾರ್ವಜನಿಕ ಹಣದ ಪೋಲು. ಎರಡನೆಯದು, ತನ್ನ ಹೊಣೆಯನ್ನು ದೇವರಿಗೆ ವರ್ಗಾಯಿಸುವ ಮೂಲಕ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿರುವ ಸರ್ಕಾರದ ಬೌದ್ಧಿಕ ದಿವಾಳಿತನ. ಜಪ ಮಾಡಿ ದೇವರನ್ನು ಒಲಿಸಿಕೊಳ್ಳಲು ಸಾಧ್ಯವಿದೆ ಎಂದಾದರೆ, ಜನಪರ – ಸುಸ್ಥಿರ ಸರ್ಕಾರ ಮತ್ತು ಸ್ವಾರ್ಥರಹಿತ ರಾಜಕಾರಣಿಗಳಿಗಾಗಿ ನಮ್ಮ ಜನ ಒಪ್ಪೊತ್ತಿನ ಊಟದ ದುಡ್ಡನ್ನಾದರೂ ಮಿಗಿಸಿ ಪೂಜೆ ಮಾಡಿಸಬಹುದಲ್ಲವೇ?

ರಾಜ್ಯದಲ್ಲಿ 34 ಸಾವಿರ ಮುಜರಾಯಿ ಮಂದಿರಗಳಿದ್ದು, ಅವುಗಳಲ್ಲಿ ಪರ್ಜನ್ಯ ಜಪಕ್ಕಾಗಿ ಸುಮಾರು ಹದಿನೇಳು ಕೋಟಿ ರೂಪಾಯಿ ಖರ್ಚಾಗುತ್ತದೆ ಎನ್ನಲಾಗಿದೆ. ಈ ಮೊತ್ತ ಒಂದು ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡಿಸುವ ಸರ್ಕಾರಕ್ಕೆ ಕೇವಲ ಎನ್ನಿಸಬಹುದು. ಆದರೆ, ಸಾರ್ವಜನಿಕರ ಪ್ರತಿ ರೂಪಾಯಿಯನ್ನು ಖರ್ಚು ಮಾಡಲೂ ಸರ್ಕಾರ ಹಲವು ಬಾರಿ ಯೋಚಿಸಬೇಕು. ಅಧಿಕಾರ ಸ್ಥಾನದಲ್ಲಿರುವವರು ತಮ್ಮ ವೈಯಕ್ತಿಕ ಅಭಿರುಚಿ – ನಂಬಿಕೆಗಳನ್ನು ಮೀರಿ ಜನಹಿತದ ಕುರಿತು ಚಿಂತಿಸಬೇಕು. ದುರದೃಷ್ಟವೆಂದರೆ, ಈ ವಿವೇಕ ಆಡಳಿತದ ಚುಕ್ಕಾಣಿ ಹಿಡಿದವರಲ್ಲಿ ಕಾಣಿಸುತ್ತಿಲ್ಲ. ಮಂತ್ರಕ್ಕೆ ಮಾವಿನಕಾಯಿ ಉದುರಿಸುವ ಅವರ ಪ್ರಯತ್ನ ಹೊಣೆಯಿಂದ ನುಣುಚಿಕೊಳ್ಳುವ ಪಲಾಯನವಾದವಲ್ಲದೆ ಬೇರೇನೂ ಅಲ್ಲ. ಮುಖ್ಯಮಂತ್ರಿಗಳನ್ನು ಬದಲಿಸುವಲ್ಲಿ ಉತ್ಸಾಹ ತೋರಿಸುವ ಆಡಳಿತಾರೂಢ ಬಿಜೆಪಿ ಶಾಸಕರದು ಬರ ಪರಿಹಾರ ಕಾಮಗಾರಿಗಳ ಬಗ್ಗೆ ನಿರುತ್ಸಾಹದ ಪ್ರತಿಕ್ರಿಯೆ.

ಕಳೆದ ಕೆಲವು ವರ್ಷಗಳಿಂದ ವಾಡಿಕೆ ಮಳೆಯಲ್ಲಿ ವ್ಯತ್ಯಯ ಉಂಟಾಗಿದೆಯಾದರೂ, ಈ ವರ್ಷದ ಬರಗಾಲ ಮತ್ತಷ್ಟು ಉಗ್ರವಾಗಿದೆ. ಸರ್ಕಾರದ ಅಂಕಿ ಅಂಶಗಳನ್ನೇ ಉಲ್ಲೇಖಿಸುವುದಾದರೆ, ಮೇ ತಿಂಗಳಲ್ಲಿ ಶೇ. 65ರಷ್ಟು ಹಾಗೂ ಜೂನ್ ತಿಂಗಳಲ್ಲಿ ಶೇ. 37ರಷ್ಟು ಮಳೆಯ ಕೊರತೆ ರಾಜ್ಯವನ್ನು ಬಾಧಿಸಿದೆ. ಜುಲೈನಲ್ಲೂ ಮಳೆಯ ಪ್ರಮಾಣ ಆಶಾದಾಯಕವಾಗಿಲ್ಲ. ಇದರಿಂದಾಗಿ, ಬಿತ್ತನೆ ಆಗಬೇಕಿದ್ದ 74.70 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ, ಕೇವಲ 20 ಲಕ್ಷ ಹೆಕ್ಟೇರ್‌ನಲ್ಲಷ್ಟೇ ಬಿತ್ತನೆಯಾಗಿದೆ. 1.4 ಕೋಟಿ ಜಾನುವಾರುಗಳು ಮೇವಿನ ಕೊರತೆ ಎದುರಿಸುತ್ತಿವೆ.

ಎಲ್ಲ ಜಿಲ್ಲೆಗಳಲ್ಲೂ ಕುಡಿಯುವ ನೀರಿನ ಸಮಸ್ಯೆಯಿದೆ. ರಾಜ್ಯದಲ್ಲಿನ 3542 ಕೆರೆಗಳ ಪೈಕಿ ಎರಡೂವರೆ ಸಾವಿರಕ್ಕೂ ಹೆಚ್ಚು ಕೆರೆಗಳು ಬರಿದಾಗಿವೆ. ಉಳಿದ ಕೆರೆಗಳಲ್ಲಿ ಅಲ್ಪ ಸ್ವಲ್ಪ ನೀರಿದೆ. ಒಂದೆಡೆ ಕೆರೆಗಳ ಸಂಖ್ಯೆ ಕ್ಷೀಣಿಸುತ್ತಿದೆ. ಇನ್ನೊಂದೆಡೆ ಇರುವ ಕೆರೆಗಳು ಒತ್ತುವರಿಯಾಗುತ್ತಿವೆ ಹಾಗೂ ಹೂಳಿನ ಬೊಜ್ಜು ಬೆಳೆಸಿಕೊಂಡಿವೆ. ಹೂಳು ತೆಗೆಸುವ ಬಗ್ಗೆ, ಅಂತರ್ಜಲ ವೃದ್ಧಿಸುವ ಬಗ್ಗೆ ಮೀನ– ಮೇಷ ಎಣಿಸುವ ಸರ್ಕಾರ ಪೂಜೆಯ ವಿಚಾರದಲ್ಲಿ ಧಾರಾಳಿಯಾಗಿದೆ. ಕೇಂದ್ರದ ನೆರವಿಗೆ ಹಾಗೂ ದೇವರಿಗೆ ಮೊರೆ ಹೋಗುವಷ್ಟಕ್ಕೆ ತನ್ನ ಕರ್ತವ್ಯ ಸೀಮಿತ ಎಂದು ಸರ್ಕಾರ ಭಾವಿಸಿದಂತಿದೆ.

ಧರ್ಮದ ವಿಷಯದಲ್ಲಿ ಹಿಂದೆ ಯಾವ ಸರ್ಕಾರಗಳಿಗೂ ಇಲ್ಲದ ಉತ್ಸಾಹವನ್ನು ಪ್ರಸ್ತುತ ಬಿಜೆಪಿ ಸರ್ಕಾರ ತನ್ನ ಆರಂಭದ ದಿನಗಳಿಂದಲೂ ವ್ಯಕ್ತಪಡಿಸುತ್ತಿದೆ. ಧಾರ್ಮಿಕ ವಿಧಿ ವಿಧಾನಗಳು ಸರ್ಕಾರಕ್ಕೆ ವ್ಯಸನವಾಗಿ ಪರಿಣಮಿಸಿವೆ. ಅಧಿಕಾರದ ಉಳಿವಿಗಾಗಿ ಕಳೆದ ಮೂರು ವರ್ಷಗಳಲ್ಲಿ ಅಸಂಖ್ಯ ಪೂಜೆ, ಹೋಮ– ಹವನಗಳು ಬಹಿರಂಗವಾಗಿಯೇ ನಡೆದಿವೆ. ಜಗದೀಶ ಶೆಟ್ಟರ್ ಅವರಂತೂ ಮುಖ್ಯಮಂತ್ರಿಯಾದ ಆರಂಭದಲ್ಲೇ ತಮ್ಮ ಕಚೇರಿಯಲ್ಲಿ ವಿಶೇಷ ಪೂಜೆ ನಡೆಸಿದ್ದಾರೆ. ಅದರ ಬೆನ್ನಿಗೇ ಪರ್ಜನ್ಯ ಜಪದ ಆದೇಶ ಹೊರಬಿದ್ದಿದೆ. ಈ ಮೂಲಕ ಪೂರ್ವಸೂರಿಗಳ ಪರಂಪರೆಯನ್ನು ಶೆಟ್ಟರ್ ಮುಂದುವರಿಸಿದ್ದಾರೆ.

'ಬರ ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ಸೋತಿದೆ' ಎಂದು ಯಡಿಯೂರಪ್ಪನವರು ಈಚೆಗೆ ಟೀಕಿಸಿದ್ದರು. ಆದರೆ, ಸೋಲಿನ ಹೊಣೆಯನ್ನು ಅವರೂ ಹೊರಬೇಕಾಗಿದೆ. ರಾಜ್ಯದಲ್ಲಿ ಅಂತರ್ಜಲ ಸುಧಾರಣೆಗೆ ಹಾಗೂ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಈವರೆಗೆ ಬಿಜೆಪಿ ಸರ್ಕಾರ ಕೈಗೊಂಡಿರುವ ಕ್ರಮಗಳು ನಿರಾಶಾದಾಯಕವಾಗಿವೆ.

ಬರಗಾಲ ನಾಡಿನ ತಲ್ಲಣವಾಗಿ ಈಗ ಉಳಿದಿಲ್ಲ. ಅದು ಒಂದು ವರ್ಗದ ಸಂಕಟವಾಗಿ ಬದಲಾಗಿದೆ ಹಾಗೂ ರಾಜಕಾರಣಿಗಳು– ಅಧಿಕಾರಿ ವರ್ಗಕ್ಕೆ ಇಷ್ಟವಾದ ಮೇಯುವ ಆಟಕ್ಕೆ ಹುಲ್ಲುಗಾವಲಾಗಿದೆ. ಪರ್ಜನ್ಯ ಜಪವೂ ಇಂಥದೊಂದು ಮೇಯುವ ಆಟವೇ ಆಗಿದೆ.

■ **ರಘುನಾಥ ಚ.ಹ.**



ವಿಷ್ಣು.